(11)

## ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 23 ಆರ್‌ಟಿಐ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ: 12.02.2014.

## ಸುತ್ತೋಲೆ

ವಿಷಯ: ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಎ) ಮತ್ತು 4(1)(ಬಿ) ಗಳನ್ವಯ ಮಾಹಿತಿಯನ್ನು ತಯಾರಿಸಿ ವೆಬ್‌ಸೈಟ್‌ನಲ್ಲಿ ಪ್ರಕಟ ಪಡಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಪರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಅಮುಕ/40/2014, ದಿನಾಂಕ: 30.01.2014

---0---

ಕರ್ನಾಟಕ ಮಾಹಿತಿ ಆಯೋಗವು, ಆಯೋಗದ 2011-12ನೇ ಸಾಲಿನ ವಾರ್ಷಿಕ ವರದಿಯ ಶಿಫಾರಸ್ಸು ಸಂಖ್ಯೆ 2 ರಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ.

**"ಪ್ರಕರಣ 4(1)(ಎ) ಮೇರೆಗೆ ಆಕಾರಾದಿ ಪಟ್ಟಿ ಮತ್ತು ವಿಷಯಸೂಚಿ ತಯಾರಿಸುವ ಮತ್ತು ಪ್ರಕರಣ 4(1)(ಬಿ) ಮೇರೆಗೆ ಸ್ವತಃ-ಘೋಷಣೆ ಮಾಡುವ ಕಾರ್ಯವನ್ನು ಏಳು ವರ್ಷಗಳು ಕಳೆದರೂ ಅನೇಕ ಸಾರ್ವಜನಿಕ ಪ್ರಾಧಿಕಾರಿಗಳು ಇನ್ನೂ ಮಾಡಬೇಕಾಗಿರುವುದರಿಂದ ಆಯೋಗಕ್ಕೆ ಅಧಿಕ ಪ್ರಮಾಣದಲ್ಲಿ ದೂರುಗಳು ಬರುತ್ತಿವೆ. ಹಾಗಾಗಿ, ಸರ್ಕಾರವು ಎಲ್ಲಾ ಸಾರ್ವಜನಿಕ ಪ್ರಾಧಿಕಾರಿಗಳಿಗೆ ಇನ್ನೆರಡು ತಿಂಗಳುಗಳೊಳಗೆ ಈ ಕಾರ್ಯವನ್ನು ಪೂರ್ಣಗೊಳಿಸುವಂತೆ ಸೂಕ್ತ ಸೂಚನೆಗಳನ್ನು ನೀಡಿ, ಆ ಸೂಚನೆಗಳು ಪಾಲನೆಯಾಗುತ್ತಿವೆಯೇ ಎಂದು ಕಟ್ಟುನಿಟ್ಟಿನ ಮೇಲ್ವಿಚಾರಣೆ ಮಾಡಬೇಕು ಮತ್ತು ಅದಕ್ಕೆ ತಪ್ಪಿದ ಸಾರ್ವಜನಿಕ ಪ್ರಾಧಿಕಾರಿಗಳ ವಿರುದ್ಧ ಪರಿಣಾಮಕಾರಿಯಾದ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು".**

ಸರ್ಕಾರ ಎಲ್ಲಾ ಇಲಾಖೆಗಳು ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಎ) ಪ್ರಕಾರ ಸಾರ್ವಜನಿಕ ಪ್ರಾಧಿಕಾರಗಳು ನಿಗದಿತ ನಮೂನೆಯಲ್ಲಿ ಕಛೇರಿ ಕಡತಗಳನ್ನು ವಿಷಯಸೂಚಿಯೊಂದಿಗೆ ಗಣಕೀಕರಣಗೊಳಿಸಿ ಪ್ರಕಟಪಡಿಸುವುದು ಮತ್ತು 4(1)(ಬಿ) ಗಳನ್ವಯ ಇಲಾಖೆಗೆ ಸಂಬಂಧಿಸಿದ 17 ಅಂಶಗಳ ಮಾಹಿತಿಯನ್ನು ತಯಾರಿಸಿ ವೆಬ್‌ಸೈಟ್‌ನಲ್ಲಿ ಪ್ರಕಟ ಪಡಿಸುವುದು ಕಡ್ಡಾಯವಾಗಿದೆ.

**ಅಧಿನಿಯಮದ 4(1)(ಬಿ) ಪ್ರಕರಣದ ಮೇರೆಗೆ ಸಾರ್ವಜನಿಕರ ಪ್ರಯೋಜನಕ್ಕಾಗಿ ತಮ್ಮ ವೆಬ್‌ಸೈಟ್‌ಗಳಲ್ಲಿ ಅಗತ್ಯ ಮಾಹಿತಿಯನ್ನು ಈಗಾಗಲೇ ಪ್ರಕಟಿಸಿರುವಂತಹ ಇಲಾಖೆಗಳು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಬೇಕು ಮತ್ತು ಕಡ್ಡಾಯ ಸಿದ್ಧ ಮಾದರಿಗಳು ( Templates)(ಆ ಪೈಕಿ 17) ನಿಯತವಾಗಿ ಆಗುವಂತೆ ನೋಡಿಕೊಳ್ಳಬೇಕು.**

**ಈ ಅಪ್‌ಡೇಟ್ ಮಾಡಿರುವ ವಿವರಗಳನ್ನು ವೆಬ್‌ಸೈಟ್‌ಗಳಲ್ಲಿ ಪ್ರಕಟಿಸುವುದು ಮಾತ್ರವಲ್ಲದೆ ಅದನ್ನು ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಸೂಚನಾ ಫಲಕಗಳಲ್ಲೂ ಸಹ ಪ್ರಕಟಿಸಬೇಕೆಂದು ಆಯೋಗವು ಶಿಫಾರಸ್ಸು ಮಾಡುತ್ತದೆ.**

ಪು.ತಿ.ನೋ..

ಈ ಕಾರ್ಯವನ್ನು ದಿನಾಂಕ: 01.03.2014ರೊಳಗಾಗಿ ಪೂರೈಸುವಂತೆ ತಮ್ಮ ಇಲಾಖಾ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳಿಗೆ ಸೂಚಿಸುವುದು ಮತ್ತು ತಮ್ಮ ಇಲಾಖಾ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳ ಮಾಹಿತಿಯನ್ನು ದಿನಾಂಕ: 15.03.2014 ರೊಳಗಾಗಿ **ಆಯಾ ಸಚಿವಾಲಯ ಇಲಾಖೆಯೇ ಕ್ರೋಢೀಕರಿಸಿ** ಸಿಆಸುಇ(ಜನಸ್ಪಂದನ)ಕ್ಕೆ ಕಳುಹಿಸುವುದು.

ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು ಮೇಲಿನ ಸೂಚನೆಗಳನ್ನು ಪಾಲಿಸುತ್ತಿರುವ ಬಗ್ಗೆ ಕಟ್ಟುನಿಟ್ಟಿನ ಮೇಲ್ವಿಚಾರಣೆ ಮಾಡಬೇಕು ಮತ್ತು ಅದಕ್ಕೆ ತಪ್ಪಿದ ಸಾರ್ವಜನಿಕ ಪ್ರಾಧಿಕಾರಗಳ ವಿರುದ್ಧ ಪರಿಣಾಮಕಾರಿಯಾದ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು.

**(ಪರಮೇಶ್ ಪಾಂಡೆ)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

**ಇವರಿಗೆ,**

ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು